**ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ**
**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560018.

**संस्कृतशिक्षणनिर्देशनालयः**
**कर्नाटकसंस्कृतविश्वविद्यालयः**
पम्पमहाकविमार्गः, चामराजपेटे, बेङ्गलूरु–५६००१८

ಕಸಂವಿ/ಸಂಶಿನಿ/ಸುತ್ತೋಲೆ/03/2013–14 ದಿನಾಂಕ: 09.10.2013

**ಕಛೇರಿ ಸುತ್ತೋಲೆ.**

**ವಿಷಯ: ಸುತ್ತೋಲೆ ತಿದ್ದುಪಡಿ ಬಗೆಗೆ.**

ಉಲ್ಲೇಖ:1. ದಿನಾಂಕ: 07.09.2013ರ ಪ್ರಶಿಕ್ಷಣ ಪರಿಷತ್ ಸಭೆಯ ಅನುಮೋದನೆ.

2. ಮಾನ್ಯ ಕುಲಪತಿಗಳ ಅನುಮೋದನೆ ಸಂಖ್ಯೆ 05. ದಿನಾಂಕ: 27.09.2013

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1)ರ ಅನುಮೋದನೆಯಂತೆ ಉಲ್ಲೇಖ(2)ರ ಮಾನ್ಯ ಕುಲಪತಿಗಳ ಆದೇಶದಂತೆ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಕೃತ ಪಾಠಶಾಲಾ ಮುಖ್ಯೋಪಾಧ್ಯಾಯರಿಗೆ 2013–14ನೇ ಶೈಕ್ಷಣಿಕ ವರ್ಷಕ್ಕೆ ದಿನಾಂಕ: 26.06.2013.ರಲ್ಲಿ ಸುತ್ತೋಲೆ ಹೊರಡಿಸಲಾಗಿತ್ತು. ಆ ಸುತ್ತೋಲೆಯ ಕ್ರಮಸಂಖ್ಯೆ 05 ಮತ್ತು 08 ಕ್ಕೆ ತಿದ್ದುಪಡಿ ಮಾಡಿ ಈ ಕೆಳಕಂಡಂತೆ ಮರು ಆದೇಶವನ್ನು ಹೊರಡಿಸಲಾಗಿದೆ.

1. ರಾಜ್ಯದ ಸಂಸ್ಕೃತ ಪಾಠಶಾಲೆಗಳಲ್ಲಿ ಪೂರಕ ಶಿಕ್ಷಣವಾದ ಪ್ರಥಮಾ ಮತ್ತು ಕಾವ್ಯ ತರಗತಿಗಳು ನಡೆಯುವಲ್ಲಿ 4 ಗಂಟೆಗಳ (40 ನಿಮಿಷಗಳ 6 ಅವಧಿ) ಬೋಧನಾವಧಿಯನ್ನು ನಿಗದಿಪಡಿಸಿದೆ.
2. ರಾಜ್ಯದ ಸಂಸ್ಕೃತ ಪಾಠಶಾಲೆಗಳಲ್ಲಿ ಪರ್ಯಾಯ ಶಿಕ್ಷಣವಾದ ಸಾಹಿತ್ಯ ತರಗತಿಗಳು ನಡೆಯುವಲ್ಲಿ 5 ಗಂಟೆಗಳ (60 ನಿಮಿಷಗಳ 5ಅವಧಿ) ಬೋಧನಾವಧಿಯನ್ನು ನಿಗದಿಪಡಿಸಿದೆ.
3. ಸಾಹಿತ್ಯ ತರಗತಿಗಳಿಗೆ ಭಾಷಾ ಪತ್ರಿಕೆ 1ಕ್ಕೆ ಸಂಸ್ಕೃತ ಭಾಷೆ ಕಡ್ಡಾಯ ಮಾಡಿರುವುದನ್ನು ಬದಲಾವಣೆ ಮಾಡಿ ಸಂಸ್ಕೃತ ಅಥವಾ ಕನ್ನಡ ಎಂದು, ಭಾಷಾ ಪತ್ರಿಕೆ 2ಕ್ಕೆ ಕನ್ನಡ/ಹಿಂದಿ/ಇಂಗ್ಲೀಷ್‌ಗೆ ಬದಲಾಗಿ ಹಿಂದಿ ಅಥವಾ ಇಂಗ್ಲೀಷ್ ಎಂದು ಪುನರ್ ನಿಗದಿಪಡಿಸಿದೆ.

**ಆದೇಶದ ಮೇರೆಗೆ.**

**ರವರಿಗೆ**
**ರಾಜ್ಯದ ಎಲ್ಲಾ ಸಂಸ್ಕೃತ ಪಾಠಶಾಲೆಗಳ ಮುಖ್ಯೋಪಾಧ್ಯಾಯರಿಗೆ.**

**ನಿರ್ದೇಶಕರು**

**ಪ್ರತಿಗಳು :**

1. ಮಾನ್ಯ ಕುಲಪತಿಗಳ ಆಪ್ತಶಾಖೆ.
2. ಮಾನ್ಯ ನಿರ್ದೇಶಕರ ಆಪ್ತಶಾಖೆ.
3. ವಿಷಯ ಪರಿವೀಕ್ಷಕರು/ ವಲಯ ಸಂಯೋಜಕರು.
4. ಆಡಳಿತ ಮಂಡಳಿಯ ಅಧ್ಯಕ್ಷರು/ಕಾರ್ಯದರ್ಶಿಗಳು.
5. ಸಂಸ್ಕೃತ ಪಾಠಶಾಲಾ ಮುಖ್ಯಶಿಕ್ಷಕರಿಗೆ.
6. ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಜಾಲತಾಣ.
7. ಕಛೇರಿ ಪ್ರತಿ.